**ಸಿ.ಸಿ.ನಂ.: 223/2023**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **11-06-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ.ಬಿ ಡಿ ಎಸ್ ವಕೀಲರಿಂದ**

**1.** ನಾನು I.C.I.C.I. Bank Kumta ಹಾಗೂ S.B.I. Gokarna Branch ಖಾತೆಗಳನ್ನು ಹೊಂದಿರುತ್ತೇನೆ. ನನ್ನ ಆದಾಯ ಹಾಗೂ ಉಳಿತಾಯವು ನಾನು ಈ ಮೇಲೆ ಹೇಳಿದ ಖಾತೆಗಳಲ್ಲಿ ಕಂಡು ಬರುತ್ತದೆ. ನನ್ನ ಈ ಮೇಲೆ ಹೇಳಿದ ಎರಡು ಬ್ಯಾಂಕನ ಉಳಿತಾಯ ಖಾತೆಗಳನ್ನು 2020-21 ರಿಂದ ಇಲ್ಲೀಯವರೆಗೆ ಖಾತೆಯ ಉತಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**2.** ಆರೋಪಿತಳು ನನಗೆ ಅಂದಾಜು 8 ವರ್ಷಗಳಿಂದ ಪರಿಚಯಸ್ಥರಾಗಿರುತ್ತಾರೆ. ನಾನು ಆರೋಪಿತಳ ಮನೆಗೆ ಹೋಗಿರುವುದಿಲ್ಲ ಆಕೆಯು ನನ್ನ ಮನೆಗೆ ಹೋಗಿ ಬಂದಿರುತ್ತಾಳೆ. ಈ ಪ್ರಕರಣದ ಹಣದ ವ್ಯವಹಾರ ನಡೆದಿದೆ ಎನ್ನಲಾದ ದಿನದ ಪೂರ್ವದಲ್ಲಿ ಎಷ್ಟು ಬಾರಿ ಯಾವ ದಿನಾಂಕದಂದು ಆರೋಪಿತಳು ನಮ್ಮ ಮನೆಗೆ ಬಂದು ಹೋಗಿದ್ದಾಳೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಹಾಗೂ ಎಷ್ಟು ಬಾರಿ ಎಂದು ನೆನಪಿಲ್ಲ. ಆದರೆ ಆಕೆಯು ಬಂದು ಹೋಗಿದ್ದಾಳೆ ಎಂದು ನುಡಿಯುತ್ತಾಳೆ. ರೂ.150000-00 ಹಣವು ದೊಡ್ಡ ಮೊತ್ತವಾಗಿರುತ್ತದೆ. ರೂ.150000-00 ವನ್ನು ನಾನು ಆರೋಪಿತಳಿಗೆ ನೀಡಿದ್ದೇನೆ ಎನ್ನುವ ಸಮಯದಲ್ಲಿ ಹಾಗೂ ಆಕೆಯು ಮರುಪಾವತಿ ಮಾಡುತ್ತಾಳೆ ಎನ್ನುವ ಭದ್ರತೆಗಾಗಿ ನಾನು ಯಾವುದೇ ದಾಖಲಾತಿಗಳನ್ನು ಮಾಡಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಆಕೆಯು ನನಗೆ ಬಹಳ ವರ್ಷದಿಂದ ಪರಿಚಯಸ್ಥರು ಎಂದು ನುಡಿಯುತ್ತಾರೆ.

**3.** ನಾನು ಆರೋಪಿತಳನ್ನು ಹೊರತುಪಡಿಸಿ ಬೇರೆ ಯಾರಿಗೂ ಸಾಲದ ರೂಪದಲ್ಲಿ ಹಣವನ್ನು ನೀಡಿರುವುದಿಲ್ಲ. ಈ ಪ್ರಕರಣದ ಸಾಲದ ಹಣವನ್ನು ನೀಡಿದ್ದೇನೆ ಎನ್ನಲಾದ ಸಮಯದಲ್ಲಿ ನನ್ನ ಖಾತೆಯಲ್ಲಿ ನಾನು ಆರೋಪಿಳಳಿಗೆ ನೀಡಿದ್ದೇನೆ ಎನ್ನಲಾದಷ್ಟು ಹಣವು ನನ್ನ ಖಾತೆಯಲ್ಲಿ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರಿದು ನನ್ನ ಕೈಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಈ ಪ್ರಕರಣದ ವ್ಯವಹಾರ ನಡೆಯುವ ಪೂರ್ವದಲ್ಲಿ ಎಷ್ಟು ದಿನಗಳಿಂದ ಯಲ್ಲಾಪುರದಲ್ಲಿ ಮನೆ ಮಾರಾಟ ಮಾಡಿದ ಹಣ ರೂ.30 ಲಕ್ಷ ನನ್ನಲ್ಲಿ ನಗದಾಗಿ ಇತ್ತು ಎಂದು ನನಗೆ ಈಗ ಹೇಳಲು ನೆನಪಿಗೆ ಬರುತ್ತಿಲ್ಲ. ಯಲ್ಲಾಪುರದಲ್ಲಿ ಇರುವ ನಮ್ಮ ಮನೆಯು ಮರಾಟ ಮಾಡಿದ್ದೇವೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷಿಯು ಮುಂದುವರಿದು ನನ್ನ ಮನೆಯವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮನೆಯವರೊಂದಿಗೆ ಬಂದಿರುತ್ತೇನೆ. ಈ ವ್ಯವಹಾರ ನಡೆದ ಪೂರ್ವಕ್ಕಿಂತ ಮೊದಲು ಆರೋಪಿತಳಿಗೆ ನಾನು ಹಣವನ್ನು ನೀಡಿರುವ ಬಗ್ಗೆ ನನಗೆ ನೆನಪಿಗೆ ಬರುತ್ತಿಲ್ಲ. ಸಾಮಾನ್ಯವಾಗಿ ಯಾರಾದರೂ ಹಣವನ್ನು ತೆಗೆದುಕೊಂಡರೆ ನಮಗೆ ನೆನಪಿಗೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಗೆ ಬರುತ್ತಿಲ್ಲ ನನಗೆ ನೆನಪಿಗೆ ಬಂದಾಗ ಹೇಳುತ್ತೇನೆ ಎಂದು ನುಡಿಯುತ್ತಾರೆ.

**4.** ದಿಃ 01/08/2022 ರಂದು ನಾನು ಆರೋಪಿತಳಿಗೆ ರೂ.150000-00 ರೂಪಾಯಿಯನ್ನು ನೀಡಿರುತ್ತೇನೆ. ಸಾಕ್ಷಿಯು ಮುಂದುವರಿದು ದಿಃ 01/08/2021 ನೇ ಸಾಲಿನಲ್ಲಿ ನಾನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಿಃ 01/08/2021 ರಲ್ಲಿ ನಾನು ಆರೋಪಿತಳಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ. ನಾನು ಆರೋಪಿತಳಿಗೆ ಪ್ರೀತಿ ವಿಶ್ವಾಸದಿಂದ ಬಡ್ಡಿ ರಹಿತವಾಗಿ

ಹಣವನ್ನು ನೀಡಿರುತ್ತೇನೆ. ನನಗೆ ಇಲ್ಲೀಯವರೆಗೆ ಆರೋಪಿತಳು ಯಾವುದೇ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ.

**5.** ನಿಪಿ 2 ನ್ನು ಆರೋಪಿತಳು ಬರೆದುಕೊಂಡು ಬಂದಿರುತ್ತಾಳೆ. ಸಾಕ್ಷಿಯು ಮುಂದುವರಿದು ಆಕೆಯು ಹಣವನ್ನು ಮರುಪಾವತಿ ಮಾಡಲು ಸತಾಯಿಸಿದ್ದು, ನಂತರದಲ್ಲಿ ಆಕೆಯು ನನ್ನ ಖಾತೆಯಲ್ಲಿ ಹಣ ಇದೆ ಎಂದು ಹೇಳಿ ನಿಪಿ 2 ನ್ನು ನನಗೆ ನೀಡಿರುತ್ತಾಳೆ ಎಂದು ನುಡಿಯುತ್ತಾರೆ. ನಿಪಿ 2 ನ್ನು ಆರೋಪಿತಳು ಬರೆದುಕೊಂಡು ಬಂದಿರುವುದರಿಂದ ನಿ.ಪಿ.2 ರಲ್ಲಿ ಇರುವ ಅಕ್ಷರ ಯಾರದ್ದು ಎಂದು ನನಗೆ ತಿಳಿದಿಲ್ಲ.

**6.** ಆರೋಪಿತಳು ನನಗೆ ಎಷ್ಟನೇ ಇಸ್ವಿಯಿಂದ ಎಲ್ಲೀಯವರೆಗೆ ಗೋಕರ್ಣದಲ್ಲಿ ಕೆಲಸ ಮಾಡಿದ್ದಾಳೆ ಎಂಬ ಬಗ್ಗೆ ನನಗೆ ತಿಳಿದಿಲ್ಲ. ಸಾಕ್ಷಿಯು ಮುಂದುವರಿದು ಆಕೆಯು ನನಗೆ ಪರಿಚಯಸ್ಥಳು ಎಂದು ನುಡಿಯುತ್ತಾಳೆ. ನಿಪಿ 2 ನ್ನು ಆರೋಪಿತಳು ನನಗೆ ನೀಡುವ ಸಂದರ್ಭದಲ್ಲಿ ಜನನಿ ಸಂಜೀವಿನಿ ಕಛೇರಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಳು. ನಿಪಿ 2 ನ್ನು ಆರೋಪಿತಳು ನನಗೆ ದಿಃ 10 ನವಂಬರ ನಂದು ನೀಡಿದ್ದು ನಾನು 11/11/ ತಾರೀಖಿಗೆ ಬ್ಯಾಂಕಿಗೆ ಹಾಕಿರುತ್ತೇನೆ. ನಾನು ಫಿರ್ಯಾದನ್ನು ದಾಖಲಿಸುವ ಸಂದರ್ಭದಲ್ಲಿ ಫಿರ್ಯಾದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಫಿರ್ಯಾದಿಯಲ್ಲಿ ಬರೆದ ತಾರೀಖುಗಳು ಸರಿಯಾಗಿ ಇವೆ.

**7.** ನಾನು ನನ್ನ ಫಿರ್ಯಾದಿಯಲ್ಲಿ ಎರಡನೇ ಪುಟದ ಮೊದಲ ಹಾಗೂ ಎರಡನೇ ಸಾಲಿನಲ್ಲಿ ಆರೋಪಿತ ದಿಃ 17/11/2022 ರಂದು ನಿಪಿ 2 ನ್ನು ನೀಡಿದ್ದು, ಸದ್ರಿ ನಿಪಿ 2 ನ್ನು ನಾನು ದಿಃ 18/11/2022 ರಂದು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಕಿರುತ್ತೇನೆ ಎಂದು ನಾನು

**ಸಿ.ಸಿ.ನಂ.: 223/2023**

ಪಿ.ಡಬ್ಲ್ಯೂ: 1

ಬರೆಸಿರುವುದಿಲ್ಲ. ನಾನು ನಿ.ಪಿ.6 ನ್ನು ಬರೆಯಲು ನನ್ನ ಯಜಮಾನರು ಮಾಹಿತಿಯನ್ನು ನೀಡಿರುತ್ತಾರೆ. ನಾವು ಯಲ್ಲಾಪುರದ ಮನೆಯನ್ನು ಮರಾಟ ಮಾಡಿದ ಕುರಿತಾಗಿ ಆದ ಕ್ರಯದ ಪತ್ರ ಹಾಗೂ ನನ್ನ ಬ್ಯಾಂಕ ಖಾತೆಗಳ ವಿವರಗಳನ್ನು ಮುಂದಿನ ಮುದ್ದತ್‌ದಂದು ನ್ಯಾಯಾಲಯಕ್ಕ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ